

# ಗಂಡ –ಹೆಂಡಿರ ಬಂಡೆ

ಪ್ರಪಂಚದಲ್ಲಿ ವಿವಿಧ ಬಗೆಯ ಜನರಿದ್ದಂತೆ ವಿಚಿತ್ರ ಸಂಪ್ರದಾಯ ಹಾಗೂ ಆಚರಣೆಗಳೂ ಇವೆ. ಮೀಟೋ ಇವಾ ಅಥವಾ ಗಂಡ ಹೆಂಡಿರ ಬಂಡೆ ಅಥವಾ ಮದುವೆಯಾದ ಬಂಡೆಗಳು ಎಂದು ಕರೆಯುವ ಎರಡು ಚಿಕ್ಕ ಬಂಡೆಗಳು ಜಪಾನ್ ದೇಶದ ಫುಟಾಮಿ ಕೊಲ್ಲಿಯ ಬಳಿಯಿರುವ ಫುಟಾಮಿ ಓಕಿಟಾಮ ಜಿಂಜಾ ಗುಡಿಯ ಎದುರಿನಲ್ಲಿ ಇವೆ.

ಶಿಂಟೋ ಜನರ ನಂಬಿಕೆ ಪ್ರಕಾರ ಈ ಎರಡೂ ಬಂಡೆಗಳು ಸೃಷ್ಟಿಕರ್ತರನ್ನು ಪ್ರತಿನಿಧಿಸುವುದರಿಂದ ಇವೆರಡನ್ನೂ ಗಂಡು ಹೆಣ್ಣಿನ ಮದುವೆಯ ಆಚರಣೆಯಂತೆ ಒಂದುಗೂಡಿಸುತ್ತಾರೆ. ಇವೆರಡರಲ್ಲಿ ದೊಡ್ಡ ಬಂಡೆಯಾದ ಗಂಡ ಇಜಾಂಜಿ 9 ಮೀಟರ್ ಎತ್ತರವಾಗಿದ್ದು ಸುಮಾರು 40 ಮೀಟರ್ ಸುತ್ತಳತೆ ಹೊಂದಿದೆ. ಇದರ ಶೃಂಗಭಾಗದಲ್ಲಿ ಶಿಂಟೋ ಟೋರಿ ಗೇಟ್ ಇದೆ. ಬಲಭಾಗದಲ್ಲಿ 3.6 ಮೀಟರ್ ಎತ್ತರದ ಹೆಂಡತಿ ಇಜಾನಾಮಿ ಬಂಡೆ ಇದ್ದು, ಸುಮಾರು 9 ಮೀಟರ್ ಸುತ್ತಳತೆ ಹೊಂದಿದೆ.

ಶಿಂಟೋ ದೇವಸ್ಥಾನ ಹಾಗೂ ಯಾತ್ರಾ ಸ್ಥಳಗಳ ವೈಶಿಷ್ಟ್ಯದಂತೆ ಮದುವೆಯಾದ ಈ ಜೋಡಿ ಬಂಡೆಗಳನ್ನು ಪವಿತ್ರವಾದ ಹಗ್ಗದಿಂದ ಸೇರಿಸುತ್ತಾರೆ. ಈ ಹಗ್ಗವನ್ನು 'ಶಿಮೆನಾವಾ' ಎಂದು ಕರೆಯುವ ಭತ್ತದ ಹುಲ್ಲಿನಿಂದ ಹೆಣೆದು ಸಿದ್ಧಪಡಿಸುತ್ತಾರೆ. ಬಂಡೆಗಳನ್ನು ಬೆಸೆಯುವ ಈ ಹಗ್ಗ ಸುಮಾರು ಒಂದು ಟನ್ ತೂಕವಿದೆ. ಇದನ್ನು ಒಂದು ವರ್ಷದ ಅವಧಿಯಲ್ಲಿ ಮೂರು ಸಲ ಅಂದರೆ ಮೇ, ಸೆಪ್ಟೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಬದಲಾಯಿಸುತ್ತಾರೆ.

ಊಶಿ ಮೆನವಾ ಉತ್ಸವದಲ್ಲಿ(ಹಗ್ಗವನ್ನು ಬದಲಾಯಿಸುವ ಆಚರಣೆ) ಸ್ಥಳೀಯ ಹಳ್ಳಿಗರು, ನಾಲ್ಕು ಇಂಚಿನಷ್ಟು ದಪ್ಪನಾದ 5 ಹಗ್ಗಗಳನ್ನು ಮರು ನಿರ್ಮಾಣ ಮಾಡುತ್ತಾರೆ. ಪ್ರತಿಯೊಂದು ಹಗ್ಗವು 115 ಅಡಿಗಳಷ್ಟು ಉದ್ದವಿದ್ದು ಎರಡೂ ಬಂಡೆಗಳನ್ನು ಸುತ್ತುವರೆದು ಪರಸ್ಪರ ಸಂಪರ್ಕಿಸುತ್ತದೆ. ಪ್ರತಿಯೊಂದು ಬಾರಿಯೂ ಹಗ್ಗವನ್ನು ಬದಲಿಸುವ ಈ ಉತ್ಸವವು ಹಳ್ಳಿಯ ಸುತ್ತಮುತ್ತಲೂ ಭಾರೀ ಸುದ್ದಿಯನ್ನುಂಟು ಮಾಡುತ್ತದೆ.

ದೇವಸ್ಥಾನದಲ್ಲಿನ ಶಾಸನ ಪ್ರಕಾರ 14ನೇ ಶತಮಾನಕ್ಕೂ ಮೊದಲೇ ಈ ರೀತಿ ಹಗ್ಗಗಳನ್ನು ತೂಗು ಬಿಡಲಾಗುತ್ತಿತ್ತೆಂದು ತಿಳಿದು ಬಂದಿದೆ. ಬೇಸಿಗೆ ಕಾಲದ ಮುಂಜಾವಿನಲ್ಲಿ ಈ ಎರಡು ಬಂಡೆಗಳ ಮಧ್ಯೆ ಉದಯಿಸುವ ಸೂರ್ಯನನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ಅದೂ ಅಲ್ಲದೆ ನವೆಂಬರ್ ನಿಂದ ಫೆಬ್ರುವರಿವರೆಗಿನ ಹುಣ್ಣಿಮೆಯ ರಾತ್ರಿಗಳ ದೃಶ್ಯವೂ ಸಹ ಮನಮೋಹಕ. ಅನತಿ ದೂರದಲ್ಲಿರುವ ಫುಜಿ ಬೆಟ್ಟವನ್ನು ಸಹ ಇಲ್ಲಿಂದ ನೋಡಬಹುದು. ಫುಟಾಮಿ ಓಕಿಟಾಮ ಜಿಂಜಾ ಗುಡಿಯಿಂದಲೂ ಮೀಟೋ ಇವಾವನ್ನು ವೀಕ್ಷಿಸಬಹುದು. ಒಟ್ಟಿನಲ್ಲಿ ಈ ಗಂಡ–ಹೆಂಡಿರ ಬಂಡೆಯು ದೇಶ ವಿದೇಶದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ.

■ ವಿದ್ಯಾ ವಿ. ಹಾಲಭಾವಿ

